ವಿ. ಶ್ರೀನಿವಾಸ

# ಬಂಧನ

"ಸಾರ್, ಏನಾದ್ರೂ ಮಾಡಿ ನೀವೇ ನನ್ನ ತಮ್ಮನನ್ನ ಕಾಪಾಡ್ಬೇಕು ಸಾರ್... ನಿಮ್ಮ ಕಾಲು ಹಿಡಿತೀನಿ, ನನ್ನ ತಮ್ಮ ಅಂಥೋನಲ್ಲ ಸಾರ್..." ಟೀವಿ ಧಾರಾವಾಹಿಗಳ ನಿರ್ದೇಶಕ ಹಾಗೂ ಸಿ.ಎಸ್.ಪಿ. ಲಾಯರ್ ಪಾತ್ರಧಾರಿಯ ಮುಂದೆ ಬಂದು ಕುಳಿತ ಸುಮಾರು 35 ವರ್ಷ ಪ್ರಾಯದ ಮಹಿಳೆ ಒಂದೇ ಸಮನೆ ಬಡಬಡಿಸುತ್ತಿದ್ದಳು. ಅವಳ ಮಾತಿಗೆ ಬ್ರೇಕ್ ಹಾಕಿದ ಸಿ.ಎಸ್.ಪಿ ಲಾಯರ್ ಅಲ್ಲಿದ್ದ ಸಹಾಯಕರ ಮೇಲೆ ರೇಗಿದರು, "ರ್ರೀ... ಯಾವುದ್ರೀ ಇದು ಹೊಸ ಕ್ಯಾರೆಕ್ಟರ್ರು? ಏನ್ರೀ ಇದು ಕತೆ?" ಅಂತ.

"ಸರ್, ಇದು ಕ್ಯಾರೆಕ್ಟರ್ ಅಲ್ಲ ಸಾರ್, ಇವರೊಬ್ರು ಪಬ್ಲಿಕ್ಕು. ಎಷ್ಟು ಹೇಳಿದ್ರೂ ಕೇಳ್ತಿಲ್ಲ ಸರ್. ನಿಮ್ಮನ್ನು ನೋಡ್ಲೇ ಬೇಕು ನಿಮ್ಮ ಬಳಿ ಮಾತಾಡ್ಲೇ ಬೇಕು ಅಂತ ಹಟ ಹಿಡಿದು ಬಂದಿದ್ದಾರೆ" ಎಂದ ಸಹಾಯಕ ಪಾಂಡು. "ರ್ರೀ... ಏನ್ರೀ ನಿಮ್ಮ ಕತೆ? ನಮ್ಮ ಧಾರಾವಾಹಿಲಿ ಹೊಸ ಪಾತ್ರಕ್ಕೆ ಅವಕಾಶ ಇಲ್ಲರೀ..." ಎಂದರು ಸಿ.ಎಸ್.ಪಿ. ಲಾಯರು. "ಸಾ... ರ್... ನಾನು ಕತೆ ಹೇಳಕ್ಕೆ ಬಂದಿಲ್ಲ, ಪಾತ್ರ ಕೇಳಕ್ಕೂ ಬಂದಿಲ್ಲ ಸಾರ್. ನನ್ನ ತಮ್ಮನನ್ನ ಪೊಲೀಸನೋರು ಅರೆಸ್ಟ್ ಮಾಡಿದಾರೆ. ಅವನನ್ನು ನೀವೇ ಬಿಡಿಸ್ಬೇಕು ಸಾರ್..." ಎಂದ ಮಹಿಳೆಯ ಕಣ್ಣಲ್ಲಿ ನೀರಧಾರೆ ಶುರುವಾಯ್ತು. ಆಗ ಸಿ.ಎಸ್.ಪಿ. ಲಾಯರ್ ನಗುತ್ತ "ರ್ರೀ... ನಾನು ಧಾರಾವಾಹಿಲಿ ಮಾತ್ರ ಲಾಯರ್ ಪಾತ್ರ ಮಾಡ್ತಿರೋದು ಕಣ್ರೀ... ನಿಜ ಜೀವನದ ಕೇಸ್‌ಗಳನ್ನು ತೊಗೊಳಲ್ಲ. ಬೇಕಾದಷ್ಟು ಲಾಯರ್‌ಗಳಿದ್ದಾರೆ ಊರಲ್ಲಿ. ಅವರ‍್ಯಾರ ಹತ್ರನಾರು ಹೋಗಿ... ಹೋಗಿ..." ಎಂದರು.

"ಸಾರ್... ಇಲ್ಲ ಸಾರ್... ಹಾಗನ್ಬೇಡಿ ನೀವೇ ಕಾಪಾಡ್ ಬೇಕು ನನ್ನ ತಮ್ಮನನ್ನ. ನಿಮ್ಮ ಪಾದಕ್ಕೆ ಬೀಳ್ತೀನಿ" ಅಂತ ಕಣ್ಣುಗಳಲ್ಲಿ ಗಂಗಾ ಕಾವೇರಿ ಹರಿಸುತ್ತ ಆ ಮಹಿಳೆ ಕಾಲಿಗೆ ಬೀಳಲು ಬಗ್ಗಿದಳು. "ಛೇ... ಛೇ, ಛೇ, ಏಳ್ರೀ ಮೇಲೆ ಏಳ್ರೀ... ಏನ್ಕತೆ ನಿಮ್ದು? ನೀವ್ಯಾರು? ನಿಮ್ಮ ಹೆಸರೇನು? ನಿಮ್ಮ ತಮ್ಮ ಯಾರು? ಪೊಲೀಸ್‌ನೋರು ಯಾಕೆ ಹಿಡ್ಕೊಂಡ್ ಹೋಗಿದಾರೆ ನಿಮ್ಮ ತಮ್ಮನ್ನ? ಎರಡೂ ಕಣ್ಣಲ್ಲಿ ನೀರು ಸುರ್ಸೋದು ಬಿಟ್ಟು ಸರ‍್ಯಾಗಿ ಹೇಳ್ರೀ..'' ಎಂದರು ಲಾಯರ್ ಸಿ.ಎಸ್.ಪಿ. ಅಂದಿನ ಧಾರಾವಾಹಿಯ ಶೂಟಿಂಗ್ ಬೇಗ ಮುಗಿದಿದ್ದರಿಂದ ಸ್ವಲ್ಪ ಬಿಡುವಾಗಿತ್ತು. ವಿಷಯ ಕೇಳಿ ತಮ್ಮ ಪರಿಚಯದ ಲಾಯರ್ ಬಳಿ ಕಳಿಸೋಣ ಎಂದುಕೊಂಡು ಆಕೆಗೆ ಸಮಾಧಾನ ಮಾಡಿದರು.

"ಥ್ಯಾಂಕ್ಸ್ ಸಾರ್. ನನ್ನ ಹೆಸರು ಹೇಮಾಮಾಲಿನಿ ದ್ರಾಕ್ಷಿಪುರ್ ಅಂತ. ನನ್ನ ತಮ್ಮನ ಹೆಸರು ಸುನೀಲ್ ಮನೋಹರ್ ದ್ರಾಕ್ಷಿಪುರ್ ಅಂತ. ನಮ್ಮ ಅಮ್ಮನಿಗೆ ಹಿಂದಿ ಸಿನಿಮಾ ಅಂದ್ರೆ ಭಾಳ ಇಷ್ಟ. ನಮ್ಮ ಅಪ್ಪನಿಗೆ ಕ್ರಿಕೆಟ್ ಆಟ ಅಂದ್ರೆ ಪ್ರಾಣ. ಅದಕ್ಕೆ ನಮಗೆ ಹೀಗೆ ಹೆಸರಿಟ್ಟಿದ್ದಾರೆ... ಎಂದು ಕತೆ ಶುರು ಮಾಡಿದಳು ಆಕೆ. ಸಿ.ಎಸ್.ಪಿ. ಲಾಯರಿಗೆ ರೇಗಿ ಹೋಯಿತು. "ರ್ರೀ... ಅದೆಲ್ಲ ಪುರಾಣ